**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ</u>**

**ಸಿಸಿ ನಂ ಃ 369/2020**
**ಸಿಡಬ್ಲ್ಯು ಃ 1**
**ಪಿಡಬ್ಲ್ಯು ಃ 1**

**ಹೆಸರು** ಃ ರಮೇಶ ಬಸಗೌಡಾ ಪಾಟೀಲ
ವಾಯಸ್ಸು : 35 ವರ್ಷ
**ಉದ್ಯೋಗ** ಃ ಪೋಲಿಸ ಉಪ ನಿರೀಕ್ಷಕರು,
ಸೈಬರ ಕ್ರೈಮ ಪೋಲಿಸ ಠಾಣೆ , ಹುಬ್ಬಳ್ಳಿ
**ವಾಸ** ಃ ಹುಬ್ಬಳ್ಳಿ

**(ದಿನಾಂಕಃ 10-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**<u>ಮುಖ್ಯ ವಿಚಾರಣೆ - ಸಸಅ ರವರನ್ನು ಕೂಗಿಸಲಾಗಿ ಅವರು ಗೈರು ಹಾಜರ ಆಗಿರುತ್ತಾರೆ. ಆದ್ದರಿಂದ ಸಾಕ್ಷಿಯು ಸ್ವತಃ ಸಾಕ್ಷಿ ಹೇಳಲು ಸಿದ್ದನಿರುವುದರಿಂದ ಕಲಂ 311 ಸಿ ಆರ್ ಪಿ ಸಿ ಅಡಿಯಲ್ಲಿ ಸಾಕ್ಷಿ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.</u>**

1. ನಾನು 2019 ರಿಂದ 2021 ರ ವರೆಗೆ ನಾನು ಯಮಕನಮರಡಿ ಪೋಲಿಸ ಠಾಣೆ ಯಲ್ಲಿ ಉಪನಿರೀಕ್ಷಕರು ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ .

2. ದಿನಾಂಕ 19-02-2020 ರಂದು ಬೆಳಿಗ್ಗೆ 6-00 ಗಂಟೆಗೆ ನಾನು ಮನೆಯಲ್ಲಿದ್ದಾಗ ನನಗೆ ಬಾತ್ಮಿ ಬಂದಿದ್ದು ಅದರಲ್ಲಿ ಗುಮಚನಮರಡಿ ಮಾವನೂರ ರಸ್ತೆಯ ಮೇಲೆ ಬಾಳಪ್ಪ ಯಲ್ಲಪ್ಪ ನಾಯಕ ಎಂಬ ವ್ಯಕ್ತಿ ಅನಧೀಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಹೇಳಿದ್ದು , ನಾನು ತಕ್ಷಣ ನನ್ನ ವಾಹನ ಕೆಎ-22 ಜಿ-513 ಯಲ್ಲಿ ಡ್ರೈವರನ್ನು ತೆಗೆದುಕೊಂಡು ಪಾಶ್ಚಾಪೂರ ಹೊರಠಾಣೆಗೆ ಬೆಳಿಗ್ಗೆ 6-30 ಕ್ಕೆ ಭೇಟಿ ಕೊಟ್ಟು, ಹೊರಠಾಣೆಯಲ್ಲಿದ್ದ ಚಾಸಾ-4 ರಿಂದ 6 ಇವರಿಗೆ ಬಾತ್ಮಿ ಬಂದ ಸಂಗತಿ ತಿಳಿಸಿ, ಚಾಸಾ-5 ರವರಿಗೆ ಇಬ್ಬರು ಪಂಚರನ್ನು ಕರೆದುಕೂಂಡು ಬರಲು ತಿಳಿಸಿದ್ದು ಅವರು 6-40 ಗಂಟೆಗೆ ಚಾಸಾ-2 ಮತ್ತು 3 ಇವರನ್ನು ಉಪಠಾಣೆಗೆ ಕರೆದುಕೊಂಡು ಬಂದಿದ್ದು , ನಾನು ಅವರಿಗೆ ಬಾತ್ಮಿ ಬಂದ ವಿಚಾರವನ್ನು ತಿಳಿಸಿ , ಅವರಿಗೆ ನೋಟಿಸು ಕೊಟ್ಟು ಪಂಚರಾಗಿ ಹಾಜರ ಇರಲು ಕೇಳಿಕೊಂಡು , ಅವರ ಒಪ್ಪಿಗೆ ಪಡೆದು ಅವರನ್ನೂ ಸಹ ಕರೆದುಕೊಂಡು ಅದೇ ಜೀಪಿನಲ್ಲಿ ಬಾತ್ಮಿ ಬಂದಂತಹ ಸ್ದಳಕ್ಕೆ 7-00 ಗಂಟೆಗೆ ಹೋದೆವು. ಬಾತ್ಮಿ ಬಂದ ಸ್ಥಳದಲ್ಲಿ ಸ್ವಲ್ಪ

ದೂರದಲ್ಲಿ ವಾಹನವನ್ನು ನಿಲ್ಲಿಸಲಾಗಿ ರಸ್ತೆಯಲ್ಲಿ ಒಬ್ಬ ವ್ಯಕ್ತಿಯು ಬಿಳಿ ಬಣ್ಣದ ಒಂದು ಕ್ಯಾನ ಹಿಡಿದುಕೊಂಡು ನಿಂತಿದ್ದು ಬಾತ್ಮಿಯಲ್ಲಿ ಬಂದಂತಹ ವ್ಯಕ್ತಿ ಇವನೇ ಎದು ಖಚಿತ ಆದ ನಂತರ ನಾನು ಮತ್ತು ನನ್ನ ಸಿಬ್ಬಂದಿ ಕೂಡಿ ಆ ವ್ಯಕ್ತಿಯನ್ನು  ಹಿಡಿದುಕೊಂಡೆವು.

3. ಆತನ ಹೆಸರು ವಿಚಾರಣೆ ಮಾಡಿದಾಗ ಆತನ ಹೆಸರು ಬಾಳಪ್ಪ  ಯಲ್ಲಪ್ಪ ನಾಯಕ ಎಂದು ಹೇಳಿದರು . ಬಿಳಿ ಬಣ್ಣದ ಕ್ಯಾನನಲ್ಲಿ ಏನು ಇದೆ ಎಂದು  ಕೇಳಿದಾಗ ಅದರಲ್ಲಿ ಕಳ್ಳಭಟ್ಟಿ ಸಾರಾಯಿ ಇದೆ ಎಂದು ಹೇಳಿದನು.  ನಾನು ಮತ್ತು ಪಂಚರು ನೋಡಿದಾಗ ಅದರಲ್ಲಿ ಘಾಟು ವಾಸನೆ ಬರುತ್ತಿತ್ತು .

4. ಆತ ಕಳ್ಳಭಟ್ಟಿ ಸಾರಾಯಿ ಎಲ್ಲಿಂದ ತೆಗೆದುಕೊಂಡು ಬಂದಿದ್ದಾನೆ ಹಾಗೂ ಎಲ್ಲಿಗೆ ಒಯ್ಯುತ್ತಿದ್ದಾನೆ ಎಂದು ಕೇಳಿದಾಗ ಸಮರ್ಪಕ ಉತ್ತರ ಆತ ಕೊಡಲಿಲ್ಲ . ಸದರಿ 5 ಲೀಟರ ಕ್ಯಾನನಿಂದ 1 ಲೀಟರಿನಷ್ಟು  ಸ್ಯಾಂಪಲನ್ನು ಪಂಚರ ಸಮಕ್ಷಮ ಒಂದು ಪ್ಲಾಸ್ಟಿಕ ಬಾಟಲಿಯಲ್ಲಿ ಜಪ್ತಿ ಪಡಿಸಿಕೊಂಡೆವು.  ಸದರಿ ಬಾಟಲಿಯನ್ನು  ಬಿಳಿ  ಬಟ್ಟೆಯಿಂದ ಪ್ಯಾಕಮಾಡಿ  ಅದನ್ನು ಅರಗಿನಿಂದ ಶೀಲು ಮಾಡಿ ಪಂಚರು ಮತ್ತು ನನ್ನ ಸಹಿ ಇರುವ ಚೀಟಿಗಳನ್ನು ಅಂಟಿಸಲಾಯಿತು. ಸ್ಥಳದಲ್ಲಿ ಪಂಚನಾಮೆಯನ್ನು ಸವಿಸ್ತಾರವಾಗಿ  ಜರುಗಿಸಲಾಯಿತು. ನಂತರ ಸಿಕ್ಕಂತಹ ಮುದ್ದೆಮಾಲು ಹಾಗೂ ಆರೋಪಿಯೊಂದಿಗೆ ಠಾಣೆಗೆ ಬಂದು  ಸರಕಾರದ ಪರವಾಗಿ ನಾನು  ಫಿರ್ಯಾದನ್ನು ಸಲ್ಲಿಸಿರುತ್ತೇನೆ .

5. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲ 1 ಪ್ಲಾಸ್ಟಿಕ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ .  ಅದನ್ನು  ಮು.ಮಾ.1  ಎಂದು ಗುರುತಿಸಲಾಯಿತು .  ನಾನು ಕೊಟ್ಟಂತಹ ದೂರನ್ನು ಈಗ ನೋಡುತ್ತಿದ್ದೇನೆ  , ಅದರಲ್ಲಿ ನನ್ನ ಸಹಿ ಇದೆ ಅದನ್ನು ನಿ.ಪಿ -1 ಎಂದು ಸಾಕ್ಷಿಯ ಸಹಿ ನಿ.ಪಿ-1(ಎ) ಎಂದು ಗುರುತಿಸಲಾಯಿತು. ಅಂದು ಮಾಡಿದ  ಪಂಚನಾಮೆಯನ್ನು ನೋಡುತ್ತಿದ್ದೇನೆ , ಅದನ್ನು  ನಿ.ಪಿ-2 ಎಂದು ಸಾಕ್ಷಿಯ ಸಹಿ ನಿ.ಪಿ-2(ಎ) ಎಂದು ಗುರುತಿಸಲಾಯಿತು. ಪಂಚರಿಗೆ ನೀಡಿದ ನೋಟಿಸನ್ನು ನಿ.ಪಿ -3 ಎಂದು  ಸಾಕ್ಷಿಯ ಸಹಿ ನಿ.ಪಿ-3(ಎ)  ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟಿ ಸವಾಲುಃ  ಆರೋಪಿ ಪರ ಶ್ರೀ ವಿ ಎಸ್ ಎಚ್  ವಕೀಲರಿಂದ -</u>**

ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ.**